OS No. 23/2022
PW.1 (ಲೇಪಾಕ್ಷಿ @ ಸವಿತ ಜಿ.)

ದಿನಾಂಕಃ 13-04-2023

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಹೆಚ್.ಎಸ್. ವಕೀಲರಿಂದಃ-**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ಸರ್ವೆ ನಂ.260/1 ಮತ್ತು 111/7ರ ಪಹಣಿ ಪತ್ರಿಕೆಗಳನ್ನು ನಿ.ಪಿ.1 ಮತ್ತು 2 ಎಂದು ಗುರುತಿಸಲಾಯಿತು. ಡಿಮಾಂಡ್ ರಿಜಿಸ್ಟರಿನ ನಕಲನ್ನು ನಿ.ಪಿ.3 ಎಂದು, ದಿನಾಂಕ 04/06/2007ರ ಕ್ರಯಪತ್ರದ ನಕಲನ್ನು ನಿಪಿ.4 ಎಂದು ಗುರುತಿಸಲಾಯಿತು. ವಕೀಲರ ಮೂಲಕ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು, ಅಂಚೆ ರಶೀತಿಯನ್ನು, ಅಂಚೆ ಸ್ವೀಕೃತಿಗಳನ್ನು ಮತ್ತು ಪ್ರತ್ಯುತ್ತರ ನೋಟೀಸು ಇವುಗಳನ್ನು ಕ್ರಮವಾಗಿ ನಿಪಿ.5 ರಿಂದ 13 ರವರೆಗೆ ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ತಿ. ನರಸೀಪುರ.